# ಸ್ನೇಹವೆಂಬ ವಿಸ್ಮಯ!

ನನ್ನೆದೆಯ ತೋಟದೊಳಗೆ ಅರಳಿದ ಬಣ್ಣ ಬಣ್ಣದ ಹೂಗಳಿವರು ಅಂದರೆ ಹೆಚ್ಚಾಯಿತೇನೋ ಉಪಮೆ; ಹಳತಾಯಿತೇನೋ ಮಾತು, ಕ್ಲೀಶೆಯೆನಿಸುವುದೇನೋ ಭಾವ? ಆದರೂ ಹೇಳುತ್ತೇನೆ – ನನ್ನೆದೆಯ ತೋಟದೊಳಗೆ ಅರಳಿದ ಹೂಗಳಿವರು – ನನ್ನ ಸ್ನೇಹಿತರು...

ನನ್ನೆದೆಯೇನೂ ಹದವಾಗಿರಲಿಲ್ಲ–ಇವರು ಬರುವ ಮುನ್ನ. ನಾನೇನೂ ಉತ್ತಿ, ಬಿತ್ತಿ, ಇವರ ಸ್ನೇಹದ ಮಳೆಹನಿಗೆ ಕಾದಿರಲಿಲ್ಲ! ಇವರು ಬಂದರು, ನನ್ನೆದೆಯ ಬಂಜರು ಕಲ್ಲು ನೆಲದೊಳಕ್ಕೆ. ಗೆಳೆತನದ ಸೊಗೆತನವ ಬಿತ್ತಿದರು; ನಿತ್ಯ ಹಚ್ಚ ಹಸುರಿನ ನಂದನವಾಗಲದಕೆ ತಮ್ಮಾಪ್ತತೆಯ ಮಳೆಯ ಸುರಿಸಿದರು; ಹಸಿರಾದ ಮೇಲೆ ನನ್ನೆದೆಯ ನಂದನ–ಅಲ್ಲೇ ಬಣ್ಣ ಬಣ್ಣದ ಹೂವುಗಳಾಗಿ ಅರಳಿದರು; ನನ್ನೆದೆಯ ಸ್ನೇಹ ತೋಟದ ಸೊಬಗು ನನ್ನಾತ್ಮಕ್ಕೂ ಹರಡಿ, ನನ್ನ ಮುಖದಲ್ಲಿ ಸೊಗಸಾದ ನಗುವಾಗರಳಿದವರು.

ನನ್ನೆದೆಯೆಂಬ ಆಗಸದೊಳಗೆ, ಒಂಟಿತನವೆಂಬ ಮಳೆಯೊಳಗೇ, ಸಾನಿಧ್ಯವೆಂಬ ಹೊಂಬಿಸಿಲು ತಾಕಿ, ಅರಳಿಕೊಂಡ ಕಾಮನಬಿಲ್ಲುಗಳು ಇವರು! ಇದ್ದಷ್ಟೂ ಕಾಲ ಅಚ್ಚರಿ ಹುಟ್ಟಿಸಿ, ನೋವ ಮರೆಸಿ, ಎದೆಯ ಬಾಂದಳವ ಮೆರೆಸಿ, ಮೆಲ್ಲನೆ ಕಾಣೆಯಾದಾಗ ನೆನಪನ್ನುಳಿಸಿ, ಮತ್ತೆ ಒಂಟಿತನಕ್ಕೆ ನೂಕಿ, ಮತ್ತೆ ಅದೇ ಬಿಸಿಲ್ಮಳೆಗೆ ತುಡಿಯುವಂತೆ ಮಾಡಿದವರು.

ನನ್ನೆದೆಯ ಖಾಲೀಪೀಲಿ ಹಾಳೆಯೊಳಗೆ ತಮಗೇ ತಾವೇ ಬಣ್ಣ–ಬಣ್ಣದ ಚಿತ್ತಾರವಾಗಿ ಮೂಡಿದವರು. ನಾನು ತಿದ್ದಿ ತೀಡಿದಂತೆಲ್ಲ ತಿರುಗದೇ, ನಾನು ಬಳಿದ ಬಣ್ಣಗಳೊಳಕ್ಕೆ ಕರಗದೇ, ನನ್ನೊಳಗಿದ್ದುಕೊಂಡೇ ತಮ್ಮೊಳಗೇ ತಾವು ಬೆಳೆದು, ನನ್ನನ್ನೂ ಬೆಳೆಸಿ, ತಮ್ಮ 'ವರ್ಣಭೇದ'ದಿಂದಲೇ ನನ್ನೆದೆಯ ಹಾಳೆಯನ್ನು ಸುಂದರವಾದ ಚಿತ್ರವನ್ನಾಗಿಸಿದವರು.

ವರುಷಗಳುರುಳಿದಂತೆಲ್ಲ ನಾನು ನನ್ನೆಡೆಗೇ ಅಚ್ಚರಿಗೊಳ್ಳುವಂತೆ ಮಾಡಿದವರು; ನನ್ನೆಲ್ಲ ಅಲ್ಪಜ್ಞ ಬುದ್ಧಿಯನ್ನು ಸಹಿಸಿಕೊಂಡವರಿವರು; ಸಹಿಸಿಕೊಳ್ಳಲಾರದಾಗ ಮೆಲ್ಲನತ್ತ ಸರಿದುಹೋದವರು; ದೂರ ಸರಿದೂ ನಾನು ಎಡವಿದಾಗ ತಾವೂ ಫಕ್ಕನೆ ಬಾಗಿ, ತಮ್ಮದೇ ಹೆಬ್ಬೆರಳ ತುದಿಯಲ್ಲಿ ರಕ್ತ ಮೂಡಿದಂತಾಗಿ, ನನ್ನ ನೋವುಂಡವರು. ನನ್ನೊಡನೆ ನಕ್ಕವರು; ನನ್ನ ಕಾಲೆಳೆದವರು, ನಡೆವ ಕಾಲು ಸೋತಾಗ ಹೆಗಲ ಆಸರೆಯಾದವರು. ನನ್ನೊಳಗೆ ನನ್ನದೆನ್ನುವುದು ಏನಿಲ್ಲದಿದ್ದರೂ ತಮ್ಮ ಸ್ನೇಹಮಾತ್ರದಿಂದ ನನ್ನ ಸ್ವಪ್ರತಿಷ್ಠೆ ಹೆಚ್ಚಿಸಿದವರು, ನನ್ನದೆನ್ನುವ ಭಾವಕ್ಕೆ ಹೊಸ ಅರ್ಥ ಮೂಡಿಸಿದವರು; ನನ್ನ ಅತೀಸ್ನೇಹಕ್ಕೂ ಬಂಧಕ್ಕೂ, ಬಂಧನಕ್ಕೂ ಸಿಲುಕಿಕೊಂಡವರು, ಸಿಕ್ಕು ನರಳಿದವರು! ಸಿಕ್ಕು ಬಿಡಿಸಿದವರು. ಇವರೆಲ್ಲರಿಂದಾಗಿ, ಇವರೆಲ್ಲರ ಸ್ನೇಹದಿಂದಾಗಿ ನಾನು ಸಂತೃಪ್ತ; ಮತ್ತ, ಉನ್ಮತ್ತ! ಇವರೆಲ್ಲರಿಂದ ತಾನೇ ನಾನು ಅತೀ ಸಾಮಾನ್ಯನಿಂದ ಅಸಾಮಾನ್ಯನಾಗಿದ್ದು, ವಿಶಾಲ ಹೃದಯಿಯಾಗಿದ್ದು?

ಈಗ, ಹೊಸ ಮಳೆಗೆ, ಹೊಸ ಬೆಳೆಗೆ, ಹೊಸ ಗೆಳೆತನದ ಬೀಜಾಂಕುರಕ್ಕೆ ನನ್ನೆದೆ ಇವರೆಲ್ಲ ಉತ್ತ ಬಯಲು, ಈ ಬಯಲಿನಲ್ಲೀಗ ಉತ್ತಷ್ಟೂ ಜಾಗ, ಬಿತ್ತಿದಷ್ಟೂ ಸ್ನೇಹ ಬೆಳೆ, ನನ್ನ ಮುಷ್ಟಿಗಾತ್ರದ ಹೃದಯಕ್ಕೀಗ ತ್ರಿವಿಕ್ರಮಾಕಾರದ ಕಳೆ! ನನ್ನೆದೆಯೆಂಬ ಆಗಸದಲ್ಲಿ, ಮೂಡಿದ ಅಸಂಖ್ಯ ಮಳೆಬಿಲ್ಲುಗಳ ಮೆರವಣಿಗೆ; ಹೊಸ ಕಾತರ, ತುಡಿತಗಳ ಉರವಣಿಗೆ. ಮತ್ತು ನನ್ನೆದೆಯನ್ನು ಹಾಳೆಯೆಂದುಕೊಂಡರೆ, ಅದರ ಮೇಲೆ ಅಗೋಚರ ಕುಂಚವೊಂದು ಮೂಡಿಸುತ್ತಿರುವ ಅದೇ ಚಿತ್ತಹಾರಕ ಚಿತ್ರಕ್ಕೆ ಹೊಸತೊಂದು ಬಣ್ಣ.

ಅಗೋ ನೋಡಿ, ನನ್ನೆದೆಯ ಆ ಮೂಲೆಯಲ್ಲೊಂದು ಸಣ್ಣದೊಂದು ಹೊಚ್ಚ–ಹೊಸತು ಸ್ನೇಹ ಈಗ ತಾನೇ ಕುಡಿಯೊಡೆದಿದೆ. ಇದೂವರೆಗೂ ಕಾಣದ ಹೊಚ್ಚ–ಹೊಸ ಸ್ನೇಹದ ಬೀಜಾಂಕುರವಾಗಿದೆ. ನಾನು ಮೆಲ್ಲನೆ ಅತ್ತ ನಡೆದು, ಆ ಹೊಸ ಕುಡಿಯ ಸುತ್ತಲ ನನ್ನೆದೆಯ ಮಣ್ಣನ್ನು ಪ್ರೀತಿಯಿಂದ ಒತ್ತುತ್ತೇನೆ. ಚೆನ್ನಾಗಿ ಬೆಳೆಯಲಿ ಈ ಹೊಸತು ಸ್ನೇಹ ಕೂಡಾ. ಬೇರೆಯದೇ ಹೂವರಳಲಿ ಇದರಲಿ, ಮತ್ತೆ ಬೇರೆಯದೇ ಸುಗಂಧ ಸೂಸಲಿ. ನನ್ನೆದೆಯ ಆಗಸದ ಹೊಸ ದಿಕ್ಕಿಗೆ ಮಳೆ ಸುರಿದು, ಬಿಸಿಲ್ಮೂಡಿ ಹೊಸತಾದ ಇನ್ನೊಂದು ಮಳೆಬಿಲ್ಲರಳಲಿ. ಎದೆಯ ಹಾಳೆಯ ಮೇಲೆ ಎಂದೂ ಮುಗಿಯದ, ಮುಗಿಯದೆಯೂ ಕೊರತೆಯೆನಿಸದ ಮನಃಮೋಹಕ ಚಿತ್ತಾರಕ್ಕೆ ಹೊಸ ಬಣ್ಣವಾಗಲಿ, ಇವೆಲ್ಲ ನನ್ನನ್ನು ಇನ್ನಷ್ಟು ಸ್ನೇಹ ಜೀವಿಯಾಗಿಸಲಿ, ಕವಿಯಾಗಿಸಲಿ, ಇಂದಾಗದಿದ್ದರೂ ಎಂದಾದರೂ ಈ ಅರ್ಥಹೀನ ಸಾಲುಗಳನ್ನೆಲ್ಲ ಒಂದು ಸುಂದರ ಕವಿತೆಯನ್ನಾಗಿಸಲಿ.

ನೋಡಿ ಎಷ್ಟೊಂದು ಅಹಂಕಾರಿ ನಾನು, ನಿಮ್ಮೆಲ್ಲರ ಸ್ನೇಹದೊಳಗೆ?!

**ಹ್ಯಾವ್ ಎ ನೈಸ್ ಡೇ**

**ಶಿವಕುಮಾರ ಕೆ. ಎಸ್.** shivuks@gmail.com